**ಕರ್ನಾಟಕ ಸರ್ಕಾರ**

**ವಾಣಿಜ್ಯ ತೆರಿಗೆಗಳ ಇಲಾಖೆ**

ಸಂಖ್ಯೆ.ವಾ.ತೆ.ಇ.ಸಿಸಿಡಬ್ಲ್ಯೂ:ಸಿಆರ್.79/11-12

ವಾಣಿಜ್ಯ ತೆರಿಗೆ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ,ಗಾಂಧಿನಗರ,
ಬೆಂಗಳೂರು 560009, ದಿನಾಂಕ:22-03-2012.

**ಸುತ್ತೋಲೆ**

ವಿಷಯ: 2011ರ ಕರ್ನಾಟಕ ನಾಗರೀಕ ಸೇವಾ ಖಾತರಿ ಅಧಿನಿಯಮವನ್ನು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಕುರಿತು.

*******

2011ರ ಕರ್ನಾಟಕ ನಾಗರೀಕ ಸೇವಾ ಖಾತರಿ ಅಧಿನಿಯಮದಡಿಯಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಒದಗಿಸಬೇಕಾದ ಸೇವೆಗಳನ್ನು ನಿಗದಿತ ಕಾಲಮಿತಿಯಲ್ಲಿ ಒದಗಿಸಲಾಗುವುದನ್ನು ಖಚಿತಪಡಿಸಕೊಳ್ಳಲು ಇಲಾಖಾಧಿಕಾರಿಗಳಿಗೆ ಕೆಲವು ನಿರ್ದೇಶನಗಳನ್ನು ನೀಡುವುದು ಅವಶ್ಯವೆಂದು ಕಂಡುಬಂದಿದೆ. ಅದರಂತೆ ಈ ಕೆಳಕಂಡ ಸೂಚನೆಗಳನ್ನು ಎಲ್ಲಾ ಸಂಬಂಧಿತ ಅಧಿಕಾರಿಗಳಿಗೆ ನೀಡಲಾಗಿದೆ. ಸದರಿ ಸೂಚನೆಗಳನ್ನು ಕಟ್ಟುನಿಟ್ಟಾಗಿ ಎಲ್ಲಾ ಸಂಬಂಧಿತ ಅಧಿಕಾರಿಗಳು ಪಾಲಿಸತಕ್ಕದ್ದು.

1. ಅಧಿಕೃತ ಕಛೇರಿಗಳ ಅಧಿಕಾರಿಗಳು ಮತ್ತು ಪರಿವೀಕ್ಷಕರು ರಜೆ ಹೋಗಬೇಕಾದ ಸಂದರ್ಭಗಳಲ್ಲಿ ಮುಂಚಿತವಾಗಿ ಸಂಬಂಧಪಟ್ಟ ವಿಭಾಗದ ಜಂಟಿ ಆಯುಕ್ತರುಗಳಿಂದ ಅನುಮತಿ ಪಡೆದು ರಜೆ ಹೋಗತಕ್ಕದ್ದು. ಜಂಟಿ ಆಯುಕ್ತರುಗಳು ರಜೆ ಹೋಗುವ ಅಧಿಕಾರಿಗಳ/ಪರಿವೀಕ್ಷಕರ ಸ್ಥಾನಕ್ಕೆ ಸೂಕ್ತ ಬದಲಿ ವ್ಯವಸ್ಥೆ ಮಾಡಿ ಇಲಾಖೆಯಲ್ಲಿ ಕರ್ನಾಟಕ ನಾಗರೀಕ ಸೇವಾ ಖಾತರಿ ಅಧಿನಿಯಮದಡಿಯಲ್ಲಿ ಒದಗಿಸಲಾಗುವ ಸೇವೆಗಳನ್ನು ಗ್ರಾಹಕರಿಗೆ ಸಲ್ಲಿಸುವಲ್ಲಿ ಯಾವುದೇ ಅಡಚಣೆಯಾಗದಂತೆ ನೋಡಿಕೊಳ್ಳತಕ್ಕದ್ದು.

2. ಒಬ್ಬರೇ ಅಧಿಕಾರಿಯಿರುವ ಕಛೇರಿಗಳಲ್ಲಿ, ಅಂಥ ಅಧಿಕಾರಿ ರಜೆ, ಸಭೆ ಅಥವಾ ತರಬೇತಿಗೆ ಹೋಗಬೇಕಾದ ಸಂದರ್ಭದಲ್ಲಿ ವಿಭಾಗದ ಜಂಟಿ ಆಯುಕ್ತರು ಕಛೇರಿಯ ಮತ್ತೊಬ್ಬ ಜವಾಬ್ದಾರಿಯುಳ್ಳ ನೌಕರರನ್ನು ಪ್ರಭಾರದಲ್ಲಿರಿಸತಕ್ಕದ್ದು. ಕರ್ನಾಟಕ ನಾಗರೀಕ ಸೇವಾ ಖಾತರಿ ಅಧಿನಿಯಮದಡಿಯಲ್ಲಿ ಒದಗಿಸಬಹುದಾದ ಸೇವೆಗಳ ಬಗ್ಗೆ ಪ್ರಭಾರದಲ್ಲಿರಿಸುವ ನೌಕರ ಜವಾಬ್ದಾರರಾಗುತ್ತಾರೆ.

3. ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಛೇರಿ, ಉಪ ಮೌಲ್ಯವರ್ಧಿತ ತೆರಿಗೆ ಕಛೇರಿ, ವೃತ್ತಿ ತೆರಿಗೆ ಕಛೇರಿ, ವಿಲಾಸ ತೆರಿಗೆ ಕಛೇರಿ ಮತ್ತು ಮನರಂಜನಾ ತೆರಿಗೆ ಕಛೇರಿಗಳ ಅಧಿಕಾರಿಗಳು ತಮ್ಮ ತಮ್ಮ ಕಛೇರಿಗಳ ಸಿಬ್ಬಂದಿ ವರ್ಗದವರಿಂದ ಹಿಂಬಾಲಿಕ ಕ್ರಮಗಳ ಬಗ್ಗೆ ಅವರ ಸೇವೆಯನ್ನು ವಿವೇಚನಾಯುತವಾಗಿ ಮತ್ತು ಸಂದರ್ಭಕ್ಕೆ ತಕ್ಕಂತೆ ಬಳಸಿಕೊಳ್ಳತಕ್ಕದ್ದು.

4. ಯಾವುದೇ ಕಛೇರಿಯಲ್ಲಿ ವಾಣಿಜ್ಯ ತೆರಿಗೆ ಪರಿವೀಕ್ಷಕರ ಹುದ್ದೆ ಖಾಲಿಯಿದ್ದಲ್ಲಿ ಅಥವಾ ಹೆಚ್ಚುವರಿ ವಾಣಿಜ್ಯ ತೆರಿಗೆ ಪರಿವೀಕ್ಷಕರ ಸೇವೆ ಅಗತ್ಯವಿದ್ದಲ್ಲಿ, ವಿಭಾಗದ ಜಂಟಿ ಆಯುಕ್ತರು ಬೇರಾವುದೇ ಕಛೇರಿಯಿಂದ ವಾಣಿಜ್ಯ ತೆರಿಗೆ ಪರಿವೀಕ್ಷಕರ ಸೇವೆಯನ್ನು ಒದಗಿಸಲು ಕ್ರಮ ಕೈಗೊಳ್ಳತಕ್ಕದ್ದು. ವಾಣಿಜ್ಯ ತೆರಿಗೆ ಪರಿವೀಕ್ಷಕರ ಸೇವೆ ಲಭ್ಯವಿಲ್ಲದಿದ್ದ ಪ್ರಕರಣಗಳಲ್ಲಿ ಅವರ ಸೇವೆ ಅಗತ್ಯವಿರುವ ಕಛೇರಿಯ ಮುಖ್ಯಸ್ಥರ ಅಭಿಪ್ರಾಯ ಪಡೆದು ಸದರಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅನುಭವಿ ಮತ್ತು ಜವಾಬ್ದಾರಿಯುಳ್ಳ ಪ್ರಥಮದರ್ಜೆ ಸಹಾಯಕರಿಗೆ ವಾಣಿಜ್ಯ ತೆರಿಗೆ ಪರಿವೀಕ್ಷಕರು ಕೈಗೊಳ್ಳಬೇಕಾದ ಕಾರ್ಯಗಳನ್ನು ನಿರ್ವಹಿಸಲು ಸೂಚಿಸುವುದು.

.....2

5. ಸ್ಥಳೀಯ ಮೌಲ್ಯವರ್ಧಿತ ತೆರಿಗೆ ಕಛೇರಿಗಳಲ್ಲಿ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು ಮತ್ತು ವಾಣಿಜ್ಯ ತೆರಿಗೆ ಅಧಿಕಾರಿ ಇಬ್ಬರೂ ಇದ್ದು ಯಾವುದೇ ಒಬ್ಬ ಅಧಿಕಾರಿ ಕಛೇರಿಯಲ್ಲಿ ಕಾರಣಾಂತರಗಳಿಂದ ಇಲ್ಲದಿದ್ದ ಸಂದರ್ಭದಲ್ಲಿ ಕಛೇರಿಯಲ್ಲಿ ಹಾಜರಿರುವ ಅಧಿಕಾರಿಯೇ ಇನ್ನೊಬ್ಬ ಅಧಿಕಾರಿಯ ಕಾರ್ಯಭಾರವನ್ನು ಸಹ ನೋಡಿಕೊಳ್ಳತಕ್ಕದ್ದು. ಸಂಬಂಧಪಟ್ಟ ಜಂಟಿ ಆಯುಕ್ತರುಗಳು ಇದರ ಬಗ್ಗೆ ನಿಗಾ ವಹಿಸಿ ಸಂದರ್ಭಾನುಸರ ಅಗತ್ಯಕ್ರಮ ಕೈಗೊಳ್ಳತಕ್ಕದ್ದು. ಇಂತಹ ಪ್ರಕರಣಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಯು ಅಂತಹ ಕಾರ್ಯನಿರ್ವಹಣೆಗೆ ಅಗತ್ಯವಾದ ಕಾರ್ಯ ವ್ಯಾಪ್ತಿ ಹಾಗೂ ಕ್ಷೇತ್ರ ವ್ಯಾಪ್ತಿ ಹೊಂದಿರುವನೆಂದು ಪರಿಗಣಿಸತಕ್ಕದ್ದು. ಈ ವ್ಯವಸ್ಥೆಯನ್ನು ಅನಿವಾರ್ಯ ಪ್ರಕರಣಗಳಲ್ಲಿ ಮಾತ್ರ ಬಳಸತಕ್ಕದ್ದು.

6. ಎಲ್ಲಾ ಮೌಲ್ಯವರ್ಧಿತ ತೆರಿಗೆ ವಿಭಾಗದ ಜಂಟಿ ಆಯುಕ್ತರುಗಳು ಕರ್ನಾಟಕ ನಾಗರೀಕ ಸೇವಾ ಖಾತರಿ ಅಧಿನಿಯಮದಡಿಯಲ್ಲಿ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನಿರ್ದಿಷ್ಟ ಪಡಿಸಿರುವ ಸೇವೆಗಳು ಸಂಬಂಧಪಟ್ಟ ಅಧಿಕೃತ ಕಛೇರಿಗಳಿಂದ ನಿಗದಿತ ಕಾಲಮಿತಿಯಲ್ಲಿ ಒದಗಿಸಲಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಅದರ ಬಗ್ಗೆ ಕಂಡುಬರುವ ಯಾವುದೇ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ಮಾರ್ಗದರ್ಶನ ನೀಡುವುದು ಮತ್ತು ಪ್ರತಿ ವಾರವೂ ಅಧಿಕೃತ ಕಛೇರಿಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳನ್ನು ಪರಿಶೀಲಿಸತಕ್ಕದ್ದು.

(ಪ್ರದೀಪ್ ಸಿಂಗ್ ಖರೋಲ)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ), ಬೆಂಗಳೂರು.

**ಇವರುಗಳಿಗೆ:**

1. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ)-1, ವಾಣಿಜ್ಯ ತೆರಿಗೆ ಕಾರ್ಯಾಲಯ, ಬೆಂಗಳೂರು.
2. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ)-2, ವಾಣಿಜ್ಯ ತೆರಿಗೆ ಕಾರ್ಯಾಲಯ, ಬೆಂಗಳೂರು.
3. ಎಲ್ಲಾ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರುಗಳು ಮೌಲ್ಯವರ್ಧಿತ ತೆರಿಗೆ ವಿಭಾಗ (ಆಡಳಿತ),1,2,3,4,5 ಮತ್ತು 6ನೇ ವಿಭಾಗ, ಬೆಂಗಳೂರು.
4. ಎಲ್ಲಾ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರುಗಳು ಮೌಲ್ಯವರ್ಧಿತ ತೆರಿಗೆ ವಿಭಾಗ (ಆಡಳಿತ), ಮೈಸೂರು/ಮಂಗಳೂರು/ಶಿವಮೊಗ್ಗ/ಧಾರವಾಡ/ಬೆಳಗಾಂ/ಗುಲ್ಬರ್ಗ ಮತ್ತು ದಾವಣಗೆರೆ.
5. ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಕಿರಿಯ ಕಾಯ್ದೆ) ಬೆಂಗಳೂರು.
6. ಎಲ್ಲಾ ಅಧಿಕೃತ ಅಧಿಕಾರಿಗಳು/ಸಕ್ಷಮ ಮತ್ತು ಮೇಲ್ಮನವಿ ಪ್ರಾಧಿಕಾರಗಳು.
7. ವಾಣಿಜ್ಯ ತೆರಿಗೆ ಉಪ ಆಯುಕ್ತರು (ಇ-ಆಡಳಿತ), ಗಣಕ ಕೇಂದ್ರ, ವಾಣಿಜ್ಯ ತೆರಿಗೆ ಕಾರ್ಯಾಲಯ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸುವ ಸಲುವಾಗಿ.

**ಪ್ರತಿಯನ್ನು:**

ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ) 6ನೇ ಮಹಡಿ, ಬಹುಮಹಡಿ ಕಟ್ಟಡ, ಡಾ: ಅಂಬೇಡ್ಕರ್ ಬೀದಿ, ಬೆಂಗಳೂರು-560001 ಇವರಿಗೆ ಮಾಹಿತಿಗಾಗಿ.